Literacy for a Billion

Movie: Bhootayyana Maga Ayyu
Year: 1974

Song: Sobaana Sobaana
Lyricist: R N Jayagopal

ಸೋಬಾನ ಸೋಬಾನ ಸೋಬಾನವೇ
ಸೋಬಾನ ಸೋಬಾನ ಸೋಬಾನವೇ
ಸೋಬಾನ ಎಂಬೋದು ಶಿವನಿಗೇ
ಸೋಬಾನ ಎಂಬೋದು ಶ್ರೀಗೌರಿಗೇ
ಸೋಬಾನ ಸೋಬಾನ ಸೋಬಾನವೇ
ಸೋಬಾನ ಸೋಬಾನ ಸೋಬಾನವೇ

ಚಂದದ ಹಸೆ ಮೇಲೆ
ಸುಂದರ ಕುಳಿತಾನೆ
ಇಂದು ಕಂಕಣವ ತೊಡಿಸೀರೇ
ಇಂದು ಕಂಕಣವ ತೊಡಿಸೀರೇ

ಇಂದು ಕಂಕಣವ
ತೊಡಿಸೀರೆ ಚೆಲುವೆಗೆ
ಚಂದನದ ಬೊಂಬೆ ಮಾದೇವೀಗೇ
ಚಂದನದ ಬೊಂಬೆ ಮಾದೇವೀಗೇ

ಅಕ್ಕ ತಂಗೇರು ಬಂದು
ಮುತ್ತಿನಾರತಿ ಎತ್ತಿ
ಅಕ್ಕ ತಂಗೇರು ಬಂದು
ಮುತ್ತಿನಾರತಿ ಎತ್ತಿ
ಕರೆಯಿರಿ ವರನನು ಮಂಟಪಕೇ

ಕರೆಯಿರಿ ವರನನು ಮಂಟಪಕೇ

ಸೋದರ ಮಾವಯ್ಯ
ಕರೆ ತನಿರಯ್ಯಾ
ಧಾರೆಗೆ ವಧುವನು
ನಿಮ್ಮ ತೌರಿನ ಬೆಳಕನು

ಹೆಜ್ಜೆ ಇಟ್ಟರೆ ಕರಲೋಳೆ
ಲಜ್ಜೆಗೆ ನೆಲವ ಕೆರೆಯೋಳೆ
ಹೆಜ್ಜೆ ಇಟ್ಟರೆ ಕರಲೋಳೆ
ಲಜ್ಜೆಗೆ ನೆಲವ ಕೆರೆಯೋಳೆ
ನಿನಯ ಗಂಡನ ಹೆಸರ ಹೇಳೆ

ನಿನಯ ಗಂಡನ ಹೆಸರ ಹೇಳೆ
ಗುಳ್ಳ
ಕದ್ದು ಹೆಂಡಿರ ನೋಡೋನೆ
ಮುದ್ದು ಮುಖಕೆ ಸೋತೋನೆ
ಕದ್ದು ಹೆಂಡಿರ ನೋಡೋನೆ
ಮುದ್ದು ಮುಖಕೆ ಸೋತೋನೆ
ನಿನಯ ಹೆಂಡತಿ ಹೆಸರ ಹೇಳು
ನಿನಯ ಹೆಂಡತಿ ಹೆಸರ ಹೇಳು
ಮಾದೇವಿ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.